

ಬೆಳ್ಳಿಯ ಡಾಬು ಹಾಕಿದ್ದಳು. ಬಸಮ್ಮ ಉಡುತ್ತಿದ್ದ ಕುಬುಸ ಊರಲ್ಲಿ ಯಾವ ಹೆಂಗಸರು ಉಡುತ್ತಿದ್ದಿಲ್ಲ. ಊರಾಗಿನ ಹೆಣ್ಣು ಮಕ್ಕಳೆಲ್ಲಾ "ಅಲ್ಲಂಗೆ ಆ ಬಸಮ್ಮ, ನಾವು ಕುಬುಸದ ಕಣ ತಗಂಬಾದು ಅದೇ ಆಲೂರು ಯೆಂಕಣ್ಣನ ಬಟ್ಟೆ ಅಂಗಡ್ಯಾಗ. ಆಕೆ ಎಲ್ಲಿ ಒಲ್ಯಾಕ ಕೊಡತಾಳೋ ಏನೋ. ಏನ್ ನಮೂನಿ ಟೈಲಾರು ಒಲುದನವೋ. ಕರಟ್ ಕುಂತಗಮ್ಮಂಗ ಒಲುದನ್ನೋಡು. ಮಂಡ್‌ತೋಳಿನ ಪಕ್ಕೇಲಿ ಹುವ್ವಿನ ಕುಚ್ಚ ಬಲುಬೇಸ್ತೈತೆ. ಅರ್ಧ ಬೆನ್ನು ಕಾಣಂಗ ರವಂಡ್ ಮಾಡಿ ಕೊಳವೆ ಹಾಕಿಸ್ಯಾಳ. ಅದ್ರ ಮ್ಯಾಲೆ ಕೊಣ್ಣಿಗೆ ಕುಕ್ಕಂಗ ಮುತ್ತು ಪೋಣಿಸಿ ಹಾಕಿಸ್ಯಾಳ" ಅಂತ ಆಡಿಕೊಳ್ಳುತ್ತಿದ್ದರು. ಬಸಮ್ಮ ಎಂದೂ ಕುಬುಸ ಹೊಲಿಸಲು ನಗರಕ್ಕೆ ಹೋದದ್ದೆ ಇಲ್ಲ. ಅಲ್ಲೆ ತಮ್ಮ ಓಣಿ ಹಿಂದೆ ಇದ್ದ ಕುಂಟು ಮಾದೇವಪ್ಪನೇ ಹೊಲ್ದು ಕೊಡುತ್ತಿದ್ದ. ಈ ಗುಟ್ಟು ಯಾವ ಹೆಂಗಸರಿಗೂ ಬಸಮ್ಮ ಹೇಳಿದ್ದಿಲ್ಲ. ಹೀಗೆ ಬಸಮ್ಮ ಬಟ್ಟೆ ಬಂಗಾರ ಉಟ್ಟುಕೊಂಡು ಮುಖಕ್ಕೆ ಒಂದೀಟು ಯುಭೂತಿ ಸವರಿಕೊಂಡು ಪೂರ್ತಿ ದೊಡ್ಡದಲ್ಲದ, ಚಿಕ್ಕದೂ ಅಲ್ಲದ, ಬೆಳಗ್ಗೆ ಮೂಡುವ ಎಳೆಸೂರ್ಯನಂತಹ ಕೆಂಪು ಹೊಂಬಣ್ಣದ ಕುಂಕುಮ ಹಚ್ಚಿಕೊಂಡು, ಉದ್ದವಾದ ಜೆಡೆಗೆ ಮೂರು ಚೆಂಡಿನ ಗೊಂಡೇವು ಕಟ್ಟಿ, ಬೈತಲೆ ತುಂಬ ಬಂಗಾರದ ಸರಗುಣಿಗೆ, ಈ ಸರಗುಣಿಕಿಗೆ ಕಟ್ಟಿದ ಐದು ಸುತ್ತಿನ ನಾಗರಪದಕ, ಈ ಪದಕದೊಳಗೆ ಸುತ್ತಿಕೊಂಡು ಶಾಂತವಾಗಿ